"the operation of the Karnataka Civil Services (Special Recruitment of SC and ST candidates to certain Group-A and Group-B posts) Rules, 1985 as published under Notification No. DPAR 34 SBC 84, dated 27-3-1985 by State of Karnataka (Annexure 'C' to the Writ Petition) and the selection for the 15 posts of Asst. Executive Engineers through the 2nd Respondent, be and the same is hereby stayed."

ಆದುದರಿಂದ ಮುಂದಿನ ಆಯ್ಕೆ ಕ್ರಮವನ್ನು ಸ್ಥಗಿತಗೊಳಿಸಲಾಗಿದೆ. ತಡೆಯಾಜ್ಞೆಯನ್ನು ತೆರವು ಮಾಡಿಸಲಂ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಮಧ್ಯೆ ೧೯೮೪-೮೫ನೇ ಸಾಲಿನ ಅಭ್ಯರ್ಥಿಗಳ ಪಟ್ಟಿಯನ್ನು ವಿಶ್ವ ವಿದ್ಯಾಲಯಗಳಿಂದ ತರಿಸಿಕೊಳ್ಳಲಾಗುತ್ತಿದೆ.

ಸರ್ಕಾರದ ಎಲ್ಲ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಬಗ್ಗೆ

೧೨೧೧. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೩ರಿಂದ ಈವರೆಗೆ ರಾಜ್ಯದ ಎಲ್ಲ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ.

ಆ) ಈ ಹುದ್ದೆಗಳಲ್ಲಿ ಅಂದಿನಿಂದ ಇಲ್ಲಿಯವರೆಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆ ಎಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ೧೯೮೩ರಲ್ಲಿ ಖಾಲಿ ಇದ್ದ ಹುದ್ದೆಗಳ ಒಟ್ಟು ಸಂಖ್ಯೆ ೪೩,೩೪೧ ಎಂದು ಅಂದಾಜು ಮಾಡಲಾಗಿತ್ತು. ೧-೮-೧೯೮೫ರಂದು ಖಾಲಿ ಇರುವ ಹುದ್ದೆಗಳ ಸಂಖ್ಯೆಯು ೪೫,೯೩೫ ಎಂದು ಅಂದಾಜು ಮಾಡಲಾಗಿದೆ. ಆದರೂ ಸಹ ೧೯೮೩ರಲ್ಲಿ ಉದ್ಭವಿಸಿದ ಖಾಲಿ ಹುದ್ದೆಗಳು ಈವರೆಗೆ ಭರ್ತಿಯಾಗದೆ ಉಳಿದಿದೆಯೆಂದು ಹೇಳಲಾಗುವುದಿಲ್ಲ.

ಆ) ಜನವರಿ ೧೯೮೩ರಿಂದ ಈವರೆಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆಯಂ ಸುಮಾರು ೨೬,೬೬೪ ಎಂದು ಅಂದಾಜು ಮಾಡಲಾಗಿದೆ.

ಪ್ರವೇಶ ತೆರಿಗೆಯನ್ನು ಆಂತ್ಯಗೊಳಿಸುವ ಬಗ್ಗೆ

೧೧೭೧. ಶ್ರೀ ಕೆ. ಎಚ್. ಪಾಟೀಲ್ (ಗದಗ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪ್ರವೇಶ ತೆರಿಗೆಯನ್ನು ಆಂತ್ಯಗೊಳಿಸುವ ಬಗ್ಗೆ ಚಳುವಳಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದ ಅಭಿಪ್ರಾಯವೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) —ಇಲ್ಲ—

ಆ) —ಉದ್ಭವಿಸುವುದಿಲ್ಲ—